"ಮರ ತನ್ನ ಗಾಯಕ್ಕೆ ಮುಲಾಮು ಹಚ್ಚಿಕೊಳ್ಳೋದು ಇರಬೇಕು ಅದು."

"ಆ ಕತಿಯಾಗ ರಾಜಕುಮಾರಿಯ ಉದ್ದ ಕೂದಲು ಹಿಡಕೊಂಡು ಕೋಟೆ ಏರತಾನಲ್ಲ ರಾಜಕುಮಾರ..."

"...ಥೇ, ಎಷ್ಟು ನೋವಾಯ್ತೋ ಆ ರಾಜಕುಮಾರಿಗೆ."

"ಆದ್ರೂ ಆ ಹುಲಿ ಬೆಟ್ಟದ ಮ್ಯಾಗಿಂದ ಜಿಗಿದು ಸಾಯಬಾರ್ದಿತ್ತು."

"ಮತ್ತೇನು, ಪುಣ್ಯಕೋಟೀನ ಕರುಗಳ ಹತ್ತಿರ ಕಳಿಸಿ ಆಗಿತ್ತಲ್ಲ. ಹುಲೀನೂ ಮನೆಗೆ ಹೋಗಿ ಆರಾಮಾಗಿ ಇರಬಹುದಿತ್ತು."

ಇಂಥ ಬಹಳಷ್ಟು ದೃಷ್ಟಾಂತಗಳು ನಡೆದ ಮೇಲೆ ಸದಾ ಅದನ್ನು, "ಒಳಗಿಂದು" ಅನ್ನುವುದಕ್ಕೆ ಶುರು ಮಾಡಿದ.

"ಒಳಗಿಂದು? ಹ್ಹಹ್ಹ, ಏನ್ ಹಂಗಂದ್ರ?"

"ಒಳಗಿಂದು ಅಂದ್ರೆ ಮನಸ್ಸಿನ ಒಳಗಿನದು."

"ಮತ್ತ ಹೊರಗಿಂದು ಅಂದ್ರ?"

"ಅಂದರೆ ಮಾತನಾಡೋದು, ಆಡಲಿಕ್ಕೆ ಸಾಧ್ಯ ಆಗೋದು ಹೊರಗಿಂದು. ಶಬ್ದಗಳಲ್ಲಿ ಹೇಳದೇ ಅರ್ಥವಾಗೋದು ಒಳಗಿಂದು."

"ಏನ್ ಹೊರಗಿಂದು ಒಳಗಿಂದೋ ನಿನ್ನ ತಲಿ" ಅಂದಾಗ ಸುಮ್ಮನೇ ನಕ್ಕ.

ಮೀನು ತಿಂದ ದಿನಗಳನ್ನು ಹೊರತು ಪಡಿಸಿ, ಅಜ್ಜಿ ನಿತ್ಯ ಸಂಜೆ ಚಹ ಕುಡಿದಾದ ಮೇಲೆ, ಮಾರುತಿ ದೇವಸ್ಥಾನಕ್ಕೆ ಭಜನೆ ಕೇಳಲು ಹೋಗುತ್ತಿದ್ದಳು. ಆಗ ಸುಗಂಧಿ ಮಾಮಿಯೂ, ಮೆಹು ಮಾಮಿಯೂ ಬಹಳ ಹೊತ್ತು ಹಿತ್ತಿಲಲ್ಲೋ, ಜಗಲಿಯ ಮೇಲೋ, ಮೆಹು ಮಾಮಿಯ ಕೋಣೆಯಲ್ಲೋ ಕುಳಿತು ಮಾತನಾಡುತ್ತಿದ್ದರು. ಆಗಾಗ ಸಣ್ಣ ದಬರಿಗಳಲ್ಲಿ ಅಡುಗೆಗಳೂ ಸರಬರಾಜಾಗುತ್ತಿದ್ದವು. ನಾನು ಅಲ್ಲೇ ಇದ್ದರೆ ಮೆಹು ಮಾಮಿ, "ಏನೇ ಪುಟ್ಟೀ" ಎಂದು ತಲೆಯ ಮೇಲೆ ಕೈ ಆಳಗುತ್ತಿದ್ದಳು. ಅಜ್ಜಿ ಬರುವ ಹತ್ತು ನಿಮಿಷದ ಮೊದಲಿನ ತನಕ ಈ ಹರಟೆ ನಡೆಯುತ್ತಿತ್ತು. ಆಗಾಗ ಕ್ಕಿಕ್ಕಿಕ್ಕೀ ಎಂಬ ದೊಡ್ಡ ನಗು ಕೋಣೆಯಲ್ಲಿ ಎದ್ದು ಕ್ಷಣಮಾತ್ರದಲ್ಲಿ ಶಾಂತವಾಗುತ್ತಿತ್ತು. ಚಂದು ಮಾಮನ ಅಗಲಿಕೆಯ ಅನಂತರ ನಗುವನ್ನೇ ಬಾಹಿರ ಮಾಡಿದಂತಿದ್ದ ಮನೆಯಲ್ಲಿ ಈ ಸದ್ದು ಆಪ್ಯಾಯಮಾನವಾಗಿತ್ತು.

ಅಜ್ಜಿ ಇಲ್ಲದ ಆ ಸಮಯದಲ್ಲಿ ಮಾತ್ರ ಅವನನ್ನು ಒಳಕೋಣೆಗೆ ಕರೆದು ನನ್ನ ಉಳಿದ ಪುಸ್ತಕಗಳನ್ನೂ, ಚನ್ನೆಮಣೆ ಆಟದ ಕೋಲನ್ನೂ, ಹಾವು–ಏಣಿ, ಲೋಡೋ ಪಟವನ್ನೂ ತೋರಿಸಲು ಸಾಧ್ಯವಾಗುತ್ತಿತ್ತು. ಅವನೂ ತನ್ನ ಕೋಣೆಗೆ ಕರೆದು ಚಂದೂಮಾಮ ತೀರಿಕೊಳ್ಳುವ ಒಂದೇ ವಾರದ ಮೊದಲು ಪೇಟೆಯಲ್ಲಿ ಕೊಡಿಸಿದ್ದ ಬ್ಯಾಟು ತೋರಿಸಿದ.

ಒಂದು ಬಗೆಯ ಕಮ್ಮನೆಯ ಪರಿಮಳ ಬೀರಿದಂತಿದ್ದ ಅವರ ಕೋಣೆ ಹೊಚ್ಚಗಿತ್ತು. ಗೋಡೆಯ ಮೇಲೆ ಹತ್ತಾರು ಚಿತ್ರಪಟಗಳ ಗಜಿಬಿಜಿ ಇಲ್ಲದೇ ಪ್ರಶಾಂತವಾಗಿ ಕಾಣುತ್ತಿತ್ತು. ಇದ್ದ ಒಂದೇ ಕಿಟಕಿಗೆ ಉದ್ದನೆಯ ಗುಲಾಬಿ ಪರದೆಯನ್ನು ಕಟ್ಟಲಾಗಿತ್ತು. ಹಾಸಿಗೆ, ಅಡುಗೆಯ ಆವಾರ ಎಲ್ಲವೂ ಚೌಕಚೌಕವಾಗಿ ಮಡಿಸಿಟ್ಟಂತೆ ಆಕರ್ಷಕವಾಗಿತ್ತು. ಹೊಲಿಗೆ ಮಷಿನ್ನಿನ ಪೆಡಲ್ಲನ್ನು ನಾನು ಆಸಕ್ತಿಯಿಂದ ಗಮನಿಸುವಾಗಲೇ ಸದಾ ನನ್ನ ಬಳಿ ಆ ಗುಟ್ಟನ್ನು ಅರುಹಿದ.

ಹೊಲಿಗೆ ಯಂತ್ರದ ಬಲಕ್ಕಿದ್ದ ಡ್ರಾಯರನ್ನು ಪೂರ್ತಿ ತೆಗೆದು ಅಂಚಿನಲ್ಲಿಟ್ಟಿದ್ದ ನೋಟಿನ ಕಟ್ಟನ್ನು ಮೆಲ್ಲಗೆ ತೆಗೆದ.

"ಅಯ್ ಇದೇನಿದು, ಇಷ್ಟೊಂದು ರೊಕ್ಕ" ಎಂಬ ಉದ್ಗಾರ ನನ್ನ ಬಾಯಿಂದ ಹೊರಟಿತು.

"ಹೌದು, ನಾನೂ ನಿನ್ನೆಯಷ್ಟೇ ನೋಡಿದೆ ಈ ಡ್ರಾಯರಿನಲ್ಲಿ."